# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.538/2014/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 17.1.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ದೇವನಹಳ್ಳಿ ತಾಲೂಕ್ ವಿಜಯಪುರ ಹೋಬಳಿ, ಧರ್ಮಪುರ ಗ್ರಾಮದ ಸರ್ವೆ ನಂ.22/ಪಿ–ಪಿ6 ಕ್ಷೇತ್ರ 2 ಎಕರೆ ಜಮೀನನ್ನು ಸರ್ಕಾರದ ಸ್ವಾಧೀನಕ್ಕೆ ಪಡೆದು ಅದಕ್ಕೆ ತಂತಿ ಬೇಲಿ ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ.

*******

ಶ್ರೀ. ಆಂಜನಪ್ಪ, ತಂದೆ ಚಿಕ್ಕನಾರಾಯಣಪ್ಪ, ಧರ್ಮಪುರ ಗ್ರಾಮ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ತಹಶೀಲ್ದಾರ್, ದೇವನಹರ್ಳಳಿ ಮತ್ತು ಇತರ ಮೂವರು ಅಧಿಕಾರಿಗಳು/ನೌಕರರು (ಇನ್ನು ಮುಂದೆ ಕ್ರಮವಾಗಿ 1ರಿಂದ 4ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲೂಕಿನ ಧರ್ಮಪುರ ಗ್ರಾಮದ ಸರ್ವೆ ನಂ.22/ಪಿ–ಪಿ6 ಕ್ಷೇತ್ರ 2 ಎಕರೆ ಜಮೀನು ಮೂಲತಃ ಸರ್ಕಾರಿ ಜಮೀನಾಗಿದ್ದು, ಆದರೆ, ಶ್ರೀಮತಿ ಗೌರಮ್ಮ ವಿ. ನಾರಾಯಣಪ್ಪ ಎನ್ನುವವರಿಗೆ ಎಲ್.ಎನ್.ಡಿ.ಎಸ್.ಆರ್–146–68–69 ಪ್ರಕಾರ ಮಂಜೂರಾಗಿದೆಂದು, ಪಹಣಿಯಲ್ಲಿ ತೋರಿಸಿರುತ್ತಾರೆ. ಆದರೆ ಇವರು ಮೂಲತಃ ಧರ್ಮಪುರ ಗ್ರಾಮದ ನಿವಾಸಿಯಾಗಿರುವುದಿಲ್ಲ ಹಾಗೂ ಇವರು ಯಾರು ಅಂತ ತಿಳಿದಿರುವುದಿಲ್ಲ. ದಿ:6–8–2007 ರಂದು ದೂರುದಾರರು ಜಿಲ್ಲಾಧಿಕಾರಿಗಳಿಗೆ ಈ ಜಮೀನಿನ ಬೋಗಸ್ ದಾಖಲೆಗಳನ್ನು ರದ್ದುಪಡಿಸಲು ಅರ್ಜಿ ಸಲ್ಲಿಸಿದ್ದು, ಇರುತ್ತದೆ. ಆದರೆ ಜಿಲ್ಲಾಧಿಕಾರಿಗಳು ಎದರುದಾರರು ನಂ.1 ರವರಿಗೆ ಈ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸಲು ಆದೇಶಿಸಿರುತ್ತಾರೆ. ಎದರುದಾರರು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯಲೋಪವೆಸಗಿರುತ್ತಾರೆ. ಆದ್ದರಿಂದ, ಎದರುದಾರರ ವಿರುದ್ದ ಸೂಕ್ತ ಕ್ರಮ ಕೈಗೊಂಡು ಸರ್ಕಾರಿ ಜಮೀನನ್ನು ಮರಳಿ ಸ್ವಾದೀನಕ್ಕೆ ಪಡೆಯಬೇಕೆಂದು ದೂರನ್ನು ಸಲ್ಲಿಸಿರುತ್ತಾರೆ.

3. ಎದುರುದಾರ ನಂ:1 ರವರು ತಮ್ಮ ಆಕ್ಷೇಪಣೆಯಲ್ಲಿ ಜಿಲ್ಲಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ರಿವಿಜನ್ ಪೆಟಿಷನ್ ನಂ.112/2013–14 ದಿ:23–5–2015 ರ ಆದೇಶದಂತೆ ಸದರಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲಾಗಿರುತ್ತದೆ. ಅದೇ ಪ್ರಕಾರ ಸರ್ಕಾರದ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

ಎದರುದಾರ ನಂ.2 ರಿಂದ 4 ರವರು ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರ್ ಉಚ್ಚರಿಸಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಧರ್ಮಪುರ ಗ್ರಾಮದ ಸರ್ವೆ ನಂ.22/ಪಿ6 ಕ್ಷೇತ್ರ 2 ಎಕರೆ ಜಮೀನು ಮೂಲತಃ ಸರ್ಕಾರಿ ಜಮೀನಾಗಿದ್ದು, ಆದರೆ, ಒಬ್ಬ ಗೌರಮ್ಮ ಎನ್ನುವವರ ಹೆಸರಿನಲ್ಲಿ ಮಂಜೂರಿಯಾದ ಬಗ್ಗೆ ಪಹಣಿ ಪತ್ರಿಕೆಯಲ್ಲಿ ನಮೂದಾಗಿದ್ದು, ಆದರೆ ಈ ವ್ಯಕ್ತಿ ಯಾರು ಅಂತ ತಿಳಿದಿರುವುದಿಲ್ಲವೆಂದು ದೂರುದಾರರು ತಮ್ಮ ದೂರಿನಲ್ಲಿ ತಿಳಿಸಿರುತ್ತಾರೆ.

ದೂರುದಾರರು ಈ ದೂರನ್ನು ಸಲ್ಲಿಸಿದ ನಂತರ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು, ಇದನ್ನು ರಿವಿಜನ್ ಪೆಟಿಷನ್ ನಂ.112/2013–14 ಅಂತಾ ದಾಖಲಿಸಿಕೊಂಡು ವಿಚಾರಣೆ ನಡೆಸಿದ್ದು ಇರುತ್ತದೆ. ಆದರೆ, ಗೌರಮ್ಮನವರ ಪರವಾಗಿ ವಕೀಲರು ವಕಾಲತ್ತನ್ನು ಸಲ್ಲಿಸಿದ್ದು, ಆದರೆ ಲಿಖಿತ ಆಕ್ಷೇಪಣೆ ಅಥವಾ ವಾದ ಮಂಡನೆ ಮಾಡಿರುವುದಿಲ್ಲ. ಆದ್ದರಿಂದ, ಲಭ್ಯವಿದ್ದ ದಾಖಲೆಗಳ ಆಧಾರದ ಮೇಲೆ ಜಿಲ್ಲಾಧಿಕಾರಿಗಳು ಆದೇಶ ನೀಡಿದ್ದು, ಅವರು ಸರ್ವೆ ನಂ.22/ಪಿ6 ಅನ್ನು ಗೌರಮ್ಮನವರ ಹೆಸರಿನಲ್ಲಿರುವುದನ್ನು ರದ್ದುಗೊಳಿಸಿ, ಸರ್ಕಾರದ ಹೆಸರಿನಲ್ಲಿ ಖಾತೆ ಮಾಡಲು ಆದೇಶಿಸಿರುತ್ತಾರೆ. ಈ ಬಗ್ಗೆ ಆದೇಶದ ಪ್ರತಿ ಲಭ್ಯ ಇರುತ್ತದೆ.

ಎದರುದಾರ ನಂ.1 ರವರು ಜಿಲ್ಲಾಧಿಕಾರಿಗಳ ಆದೇಶದ ಮೇಲೆ ಸರ್ಕಾರದ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಿ ಪಹಣಿಯಲ್ಲಿ ಸರ್ಕಾರದ ಹೆಸರು ದಾಖಲಾದ ಬಗ್ಗೆ ಪಹಣಿ ಪತ್ರಿಕೆ ಹಾಜರುಪಡಿಸಿರುತ್ತಾರೆ.

6. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಮೇಲ್ಕಾಣಿಸಿದ ದೇವನಹಳ್ಳಿ ತಾಲೂಕ್ ವಿಜಯಪುರ ಹೋಬಳಿ, ಧರ್ಮಪುರ ಗ್ರಾಮದ ಸರ್ವೆ ನಂ.22/ಪಿ–ಪಿ6 ಕ್ಷೇತ್ರ 2 ಎಕರೆ ಜಮೀನನ್ನು ಸರ್ಕಾರದ ಸ್ವಾಧೀನಕ್ಕೆ ಪಡೆದು ಅದಕ್ಕೆ ತಂತಿ ಬೇಲಿ

ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ–1984 ಕಲಂ 12(1) ರಡಿಯಲ್ಲಿ ಸಕ್ಷಮ ಪ್ರಾಧಿಕಾರವನ್ನು ಕೋರಲಾಗಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

Sd/- 12.1.12.
[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.